NOVEMBER 19, 2024

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು:

<><><>

- ವಿಶ್ವ ಶೌಚಾಲಯ ದಿನಾಚರಣೆ; ಸ್ವಚ್ಛ ಭಾರತ್ ಮಿಷನ್ ಅಡಿ, ಇಂದಿನಿಂದ ಡಿಸೆಂಬರ್ 10ರ ವರೆಗೆ, "ನಮ್ಮ ಶೌಚಾಲಯ, ನಮ್ಮ ಗೌರವ" ಅಭಿಯಾನ.
- 27ನೇ ಆವೃತ್ತಿಯ, 'ಬೆಂಗಳೂರು ತಂತ್ರಜ್ಞಾನ ಶೃಂಗಸಭೆ'ಗೆ, ಇಂದು ಮುಖ್ಯಮಂತ್ರಿ ಚಾಲನೆ.
- ಹಾರ್ವೆಸ್ಟರ್ ಹಬ್; ಬಿತ್ತನೆಯಿಂದ ಬೆಳೆ ಕಟಾವಿನ ವರೆಗೂ, ಯಾಂತ್ರಿಕೃತ ಬೇಸಾಯ ಕ್ರಮಕ್ಕೆ, ಒತ್ತು – ಎನ್.ಚಲುವರಾಯಸ್ವಾಮಿ.
- 'ಉದ್ಯಮಶೀಲತೆ ಜಾಗ್ರತಿ ಯಾತ್ರೆ'; ಧಾರವಾಡದ ಕಲಕೇರಿ ಸಂಗೀತ ವಿದ್ಯಾಲಯಕ್ಕೆ ಭೇಟಿ ನೀಡಿದ, ನೂರಾರು ಸಾಮಾಜಿಕೋದ್ಯಮಿಗಳು.

<><><>

ಈಗ ವಾರ್ತೆಗಳ ವಿವರ

<><><>

2030ರ ವೇಳೆಗೆ, ಸರ್ವರಿಗೂ ಶುದ್ಧ ಕುಡಿಯುವ ನೀರು ಮತ್ತು ಶೌಚಗೃಹ ಖಾತ್ರಿ ಪಡಿಸಲು, ವಿಶ್ವ ಆರೋಗ್ಯ ಸಂಸ್ಥೆ, ಸುಸ್ಥಿರ ಅಭಿವೃದ್ಧಿ ಗುರಿ 6ರ ಅಡಿ, ಕಳೆದ 2023 ರಿಂದ, ವಿಶ್ವ ಶೌಚಗೃಹ ದಿನವನ್ನು ಇಂದು ಆಚರಿಸುತ್ತಿದೆ. ಪ್ರಸಕ್ತ 2024ನೇ ಸಾಲಿಗೆ, ಡಬ್ಲ್ಯೂ.ಎಚ್.ಓ. 'ಶೌಚಗೃಹ ಪ್ರಶಾಂತ ಸ್ಥಳ' ಎಂಬ ಧ್ಯೇಯದೊಂದಿಗೆ, ವಿಶ್ವ ಶೌಚಗೃಹ ದಿನವನ್ನು ಆಚರಿಸಲು, ಕರೆ ನೀಡಿದೆ.

<><><>

ಸ್ವಚ್ಛ ಭಾರತ ಅಭಿಯಾನದಡಿ, ಇಂದಿನಿಂದ ಕೇಂದ್ರ ಸರ್ಕಾರ, 'ನಮ್ಮ ಶೌಚಾಲಯ; ನಮ್ಮ ಗೌರವ' ಜನಾಂದೋಲನಕ್ಕೆ ಚಾಲನೆ ನೀಡಲಿದೆ. ಬರುವ ಡಿಸೆಂಬರ್ 10, ಮಾನವ ಹಕ್ಕುಗಳ ದಿನಾಚರಣೆ ದಿನದ ವರೆಗೆ, ಈ ಆಂದೋಲನ ನಡೆಯಲಿದೆ.

<><><>

ವಿಶೇಷವಾಗಿ, ಹೆಣ್ಣು ಮಕ್ಕಳು ಮತ್ತು ಯುವತಿಯರ ಆತ್ಮ ಗೌರವ, ಸ್ವಾಭಿಮಾನ ಮತ್ತು ಖಾಸಗೀತನ ರಕ್ಷಿಸುವ ಉದ್ದೇಶದೊಂದಿಗೆ, ನೈರ್ಮಲ್ಯವನ್ನು ಮಾನವ ಹಕ್ಕುಗಳೊಂದಿಗೆ ಜೋಡಿಸಲಾಗಿದೆ.

<><><>

ಬಯಲು ಶೌಚ ಮುಕ್ತ ಗ್ರಾಮ – ಓ.ಡಿ.ಎಫ್. ಎಂದು ಘೋಷಿಸಲು, ಪ್ರತಿ ಮನೆಗೊಂದು ಶೌಚಾಲಯವನ್ನು, ಗ್ರಾಮೀಣ ಭಾಗದಲ್ಲಿ ಕಡ್ಡಾಯಗೊಳಿಸಿ, ಬಳಕೆಯನ್ನು ಖಾತ್ರಿ ಪಡಿಸಲು, ಕೇಂದ್ರ ಸರ್ಕಾರ ಕ್ರಮ ಕೈಗೊಂಡಿದೆ.

<><><>

15 ವರ್ಷದೊಳಗಿನ ಮಕ್ಕಳು, ಜಲಜನ್ಯ ಕಾಯಿಲೆಗಳು ಮತ್ತು ಅನೈರ್ಮಲ್ಯಕ್ಕೆ ತುತ್ತಾಗಿ, ಮರಣ ಹೊಂದುವುದನ್ನು ತಡೆಗಟ್ಟಲು, ವಯಕ್ತಿಕ ಶೌಚಾಲಯಗಳಿಗೆ ಒತ್ತು ನೀಡಲಾಗಿದೆ.

<><><>

ವಿಶ್ವ ಶೌಚಗೃಹ ದಿನಾಚರಣೆ ಪ್ರಯುಕ್ತ, ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ, ಇಂದಿನಿಂದ ಡಿಸೆಂಬರ್ 10ರ ವರೆಗೆ, “ನಮ್ಮ ಶೌಚಾಲಯ, ನಮ್ಮ ಗೌರವ” ಘೋಷ ವಾಕ್ಯದೊಂದಿಗೆ ಹಾಗೂ “ಅಂದದ ಶೌಚಾಲಯ, ಆನಂದದ ಜೀವನ” ಎಂಬ ಧ್ಯೇಯದೊಂದಿಗೆ, ವಿಶೇಷ ಆಂದೋಲನ ಆಯೋಜಿಸಲಾಗುತ್ತಿದೆ ಎಂದು, ಮೈಸೂರು ಜಿಲ್ಲಾ ಪಂಚಾಯ್ತಿ ಸಿ.ಇ.ಓ. ಕೆ.ಎಂ ಗಾಯಿತ್ರಿ ತಿಳಿಸಿದ್ದಾರೆ. ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ, ಶೌಚಾಲಯ ರಹಿತ ಅರ್ಹ ಫಲಾನುಭವಿಗಳು, ಶೌಚಾಲಯಗಳನ್ನು ಪಡೆಯಲು **sbm.gov.in** ಕೊಂಡಿ ಬಳಸಿ, **Citizen App** ಮೂಲಕ ಅರ್ಜಿಗಳನ್ನು ಸಲ್ಲಿಸಬಹುದು ಎಂದರು.

<><><>

ಅತ್ಯುತ್ತಮವಾಗಿ ನಿರ್ವಹಿಸಿದ, ಐದು ಗೃಹ ಶೌಚಾಲಯಗಳು ಹಾಗೂ ಐದು ಸಮುದಾಯ ಶೌಚಾಲಯಗಳನ್ನು ಆಯ್ಕೆ ಮಾಡಿ, ರಾಯಚೂರು ಜಿಲ್ಲಾಡಳಿತ ಗೌರವಿಸಲಿದೆ ಎಂದು, ಜಿಲ್ಲಾ ಪಂಚಾಯ್ತಿ ಸಿ.ಇ.ಓ. ರಾಹುಲ್ ತುಕಾರಾಮ್ ಪಾಂಡೆ ತಿಳಿಸಿದ್ದಾರೆ.

<><><>

“ನಮ್ಮ ಶೌಚಾಲಯ; ನಮ್ಮ ಗೌರವ” ವಿಶೇಷ ಆಂದೋಲನದಡಿ, ಜಿಲ್ಲೆಯಲ್ಲಿ ನಿರುಪಯುಕ್ತ ಸಮುದಾಯ ಶೌಚಾಲಯಗಳನ್ನು ಗುರುತಿಸಿ, ಅವುಗಳನ್ನು ಬಳಕೆಗೆ ಯೋಗ್ಯ ರೀತಿಯಲ್ಲಿ ಪರಿವರ್ತಿಸಲಾಗುವುದು ಎಂದು, ಚಿತ್ರದುರ್ಗ ಹಾಗೂ ಉತ್ತರಕನ್ನಡ ಜಿಲ್ಲಾ ಪಂಚಾಯಿತಿ ಸಿ.ಇ.ಓ.ಗಳು, ತಿಳಿಸಿದ್ದಾರೆ.

<><><>

ಧಾರವಾಡ ತಾಲೂಕು, ಕಾಶಿನಟ್ಟಿ ಗ್ರಾಮದ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ, ಖಾಸಗಿ, ಸಾರ್ವಜನಿಕ ಹಾಗೂ ಸರ್ಕಾರೇತರ ಸ್ವಯಂಸೇವಾ ಸಂಸ್ಥೆ ‘ಟ್ರಿಪಲ್ ಪಿ’ ಮಾದರಿಯಲ್ಲಿ ರೂಪಿಸಲಾದ, ಶೌಚಾಲಯದಿಂದ, ಮಕ್ಕಳ ಬಯಲು ಬಹಿರ್ದೆಸೆ ರೂಢಿ ನಿಂತಿದೆ. ಮಕ್ಕಳ ಮನೆಯ ಹಿರಿಯರೂ ಸಹ ಬಯಲು ಶೌಚಕ್ಕೆ ಹೋಗದಂತೆ ಜಾಗ್ರತಿ, ಶಾಲಾ ಮಕ್ಕಳಿಂದ ಮೂಡಿರುವುದು ವಿಶೇಷ. ಗ್ರಾಮದ ಸ್ವಚ್ಛತೆ

ಮತ್ತು ನೈರ್ಮಲ್ಯ ಈ ಮೊದಲು ಕಾಪಾಡುವುದೇ ಸವಾಲಾಗಿತ್ತು. ಶಾಲೆಯಲ್ಲಿ ಕೈ ತೊಳೆಯುವ ವಾಷ್ ಬೇಸಿನ್ ವ್ಯವಸ್ಥೆಯಿಂದ, ಐದು ಹಂತಗಳಲ್ಲಿ ವೈಜ್ಞಾನಿಕವಾಗಿ ಮಕ್ಕಳು, ಮಧ್ಯಾಹ್ನದ ಬಿಸಿಯೂಟದ ಮೊದಲು ಮತ್ತು ನಂತರ, ಹಾಗೂ ಶೌಚದ ಬಳಿಕ, ಕೈ ತೊಳೆಯುವುದನ್ನು ಅಭ್ಯಾಸ ಮಾಡಿಕೊಂಡ ಪರಿಣಾಮ, ಅನಾರೋಗ್ಯ ಸಮಸ್ಯೆ, ಗೈರು ಹಾಜರಾತಿಯಲ್ಲಿ ಸುಧಾರಣೆ ಕಂಡು ಬಂದಿದೆ. ಪ್ರದೇಶ ಸಮಾಚಾರಕ್ಕಾಗಿ, ಈ ಕುರಿತು ಮಾಹಿತಿ ನೀಡಿದ್ದಾರೆ, ಕಾಶಿನಟ್ಟಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಪ್ರಧಾನ ಶಿಕ್ಷಕ ಕೆ.ಬಿ. ತಾಯಣ್ಣವರ.

<><><>

ಪ್ರಧಾನ ಶಿಕ್ಷಕ ಕೆ.ಬಿ. ತಾಯಣ್ಣವರ ಧ್ವನಿ 40 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ನವೋದ್ಯಮಗಳು ಮತ್ತು ಜಾಗತಿಕ ಮಟ್ಟದ ಹೂಡಿಕೆದಾರರನ್ನು ಒಂದೇ ವೇದಿಕೆಯಡಿ ಸೇರಿಸಲು, ಬೆಂಗಳೂರು ತಂತ್ರಜ್ಞಾನ ಶೃಂಗಸಭೆ – 2024 ಇಂದಿನಿಂದ ಆಯೋಜಿತವಾಗಿದ್ದು, 21ರ ವರೆಗೆ ನಡೆಯಲಿದೆ. ಬೆಂಗಳೂರಿನ ಅರಮನೆ ಮೈದಾನದಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದು ಬೆಳಗ್ಗೆ 10 ಗಂಟೆಗೆ, ಚಾಲನೆ ನೀಡುವರು. ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಸಚಿವಾಲಯ ಸಂಘಟಿಸಿರುವ ಈ ಶೃಂಗ ಸಭೆಯನ್ನು, ಜರ್ಮನಿಯ ಆರ್ಥಿಕ ಇಲಾಖೆಯ ಮುಖ್ಯಸ್ಥರು, ಇಂದು ಉದ್ಘಾಟಿಸಲಿದ್ದಾರೆ. ಮೂರು ದಿನಗಳ ಶೃಂಗಸಭೆಯಲ್ಲಿ ನವೋದ್ಯಮಗಳಿಗೆ ಸಂಬಂಧಿಸಿದ ಹಲವು ವಿಚಾರಗೋಷ್ಠಿಗಳು ನಡೆಯಲಿವೆ. ಆಸ್ಟ್ರೇಲಿಯಾ, ಬ್ರಿಟನ್, ಫ್ರಾನ್ಸ್, ಆಸ್ಟ್ರಿಯ, ಜರ್ಮನಿ, ಸ್ವಿಜ್ಜರ್ಲೆಂಡ್, ಇಸ್ರೇಲ್, ಅಮೆರಿಕದ ಸಹಯೋಗದಲ್ಲಿ ಈ ಶೃಂಗಸಭೆ ಆಯೋಜಿತವಾಗಿದೆ ಎಂದು, ಐ.ಟಿ., ಬಿ.ಟಿ. ಖಾತೆ ಸಚಿವ ಪ್ರಿಯಾಂಕ ಖರ್ಗೆ ತಿಳಿಸಿದ್ದಾರೆ.

<><><>

ಬಿತ್ತನೆಯಿಂದ ಕಟಾವಿನ ವರೆಗೂ, ಯಾಂತ್ರಿಕ ಬೇಸಾಯ ಅಳವಡಿಸಿಕೊಂಡು, ರೈತರು ಕಡಿಮೆ ವೆಚ್ಚದಲ್ಲಿ ಹೆಚ್ಚಿನ ಲಾಭ ಗಳಿಸಲು ಸಾಧ್ಯವಿದೆ ಎಂದು, ಕೃಷಿ ಖಾತೆ ಸಚಿವ ಎನ್.ಚಲುವರಾಯಸ್ವಾಮಿ ಹೇಳಿದ್ದಾರೆ. ಮಂಡ್ಯದ ಕೊಪ್ಪ ಹೋಬಳಿಯ ಕೃಷಿಕ ಶಂಕರ್ ಅವರ ಜಮೀನಿನಲ್ಲಿ ಆಯೋಜಿಸಲಾಗಿದ್ದ, "ಕಬ್ಬಿನ ಯಾಂತ್ರೀಕೃತ ಬೇಸಾಯ ಪದ್ಧತಿ ಪ್ರಾತ್ಯಕ್ಷಿಕೆ" ತಾಕಿಗೆ ಭೇಟಿ ನೀಡಿ, ಮಾತನಾಡಿದರು. ಹಾರ್ವೆಸ್ಟರ್ ಹಬ್ ಕಾರ್ಯಕ್ರಮದಡಿ, ವಿತರಣೆ ಮಾಡಲಾಗಿರುವ ಸಂಯುಕ್ತ ಕಟಾವು ಯಂತ್ರದ ಮೂಲಕ, ಕಬ್ಬು ಕಟಾವು ವೀಕ್ಷಿಸಿ, ಸಚಿವರು ಮೆಚ್ಚುಗೆ ವ್ಯಕ್ತ ಪಡಿಸಿದರು. 5 ಅಡಿ ಅಂತರದಲ್ಲಿ ಕಬ್ಬಿನ ನಾಟಿ ಹಾಗೂ ಕಬ್ಬಿನ ಪೈರು ಬಿತ್ತನೆ  ಪ್ರಾಯೋಗಿಕ ತಾಕುಗಳನ್ನು, ವೀಕ್ಷಿಸಿದರು.

<><><>

ಹವಾಮಾನ ವೈಪರೀತ್ಯ, ಅಕಾಲಿಕ ಮಳೆ, ತೋಟಗಳಲ್ಲಿ ಕಾರ್ಮಿಕರ ತೀವ್ರ ಕೊರತೆ, ಗುಣಮಟ್ಟದ ಕಾಫಿ ಉತ್ಪಾದನೆಯಲ್ಲಿ ತೊಡಕುಗಳನ್ನು ಹೆಚ್ಚಿಸಿದೆ ಎಂದು, ದಕ್ಷಿಣ ಭಾರತ ಬೆಳೆಗಾರರ ಒಕ್ಕೂಟದ ಅಧ್ಯಕ್ಷ ಸಿ. ಮ್ಯಾಥ್ಯು ಅಬ್ರಾಹಂ ಅಭಿಪ್ರಾಯಪಟ್ಟಿದ್ದಾರೆ. ಮಡಿಕೇರಿಯಲ್ಲಿ, ಕರ್ನಾಟಕ ಪ್ಲಾಂಟರ್ಸ್ ಅಸೋಸಿಯೇಷನ್ ಆಯೋಜಿಸಿರುವ, 66ನೇ ವಾರ್ಷಿಕ ಸಮ್ಮೇಳನದ ಹಿನ್ನೆಲೆ, ಸುದ್ದಿಗೋಷ್ಠಿಯಲ್ಲಿ

ಅವರು ಮಾತನಾಡಿದರು. ಕಾಫಿ ಬೆಳೆಯುವ ಪ್ರಮುಖ ದೇಶಗಳಲ್ಲಿ, ಕಾಫಿ ಉತ್ಪಾದನೆ ಪ್ರಮಾಣ, ಗಣನೀಯವಾಗಿ ಕುಂಠಿತವಾಗಿದೆ, ಹೀಗಾಗಿ, ಭಾರತದ ಕಾಫಿಗೆ ಜಾಗತಿಕ ಮಾರುಕಟ್ಟೆಯಲ್ಲಿ, ಮುಂದಿನ 3 ವರ್ಷಗಳ ಕಾಲ ಉತ್ತಮ ಬೇಡಿಕೆ ಲಭಿಸುವ ಸಾಧ್ಯತೆ ಇದೆ ಎಂದರು. ಕರ್ನಾಟಕ, ತಮಿಳುನಾಡು, ಕೇರಳ, ಆಂಧ್ರ, ತೆಲಂಗಾಣ ರಾಜ್ಯಗಳ, ಕಾಫಿ ಬೆಳೆಗಾರರು, ಎರಡು ದಿನಗಳ ಈ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದಾರೆ.

<><><>

ಮುಂಬೈಯಿಂದ ಆಗಮಿಸಿದ, 550ಕ್ಕೂ ಹೆಚ್ಚು ಯುವಜನರನ್ನು ಒಳಗೊಂಡ, 'ಉದ್ಯಮಶೀಲತೆ ಯಾತ್ರೆ' ಪ್ರತಿನಿಧಿಗಳು, 'ಜಾಗೃತಿ ಯಾತ್ರೆ' ಪ್ರಕಲ್ಪದ ಸಿ.ಇ.ಓ. ಅಶಿತೋಷ್ ನೇತೃತ್ವದಲ್ಲಿ, ಧಾರವಾಡದ ಕಲಕೇರಿ ಸಂಗೀತ ವಿದ್ಯಾಲಯಕ್ಕೆ ಭೇಟಿ ನೀಡಿ, ಕಾನನದ ಮಧ್ಯೆ ಸಂಗೀತ ಅಭ್ಯಸಿಸುತ್ತಿರುವ, ಗ್ರಾಮೀಣ ಮಕ್ಕಳ ಜೊತೆ ಸಂವಾದ ನಡೆಸಿದರು. ಬಳಿಕ, ಕಲಕೇರಿ ಸಂಗೀತ ವಿದ್ಯಾಲಯದ ಪಾಕಶಾಲೆ, ಡಿಜಿಟಲ್ ಗ್ರಂಥಾಲಯ ಹಾಗೂ ಗಣಕಯಂತ್ರ ಕೊಠಡಿ, ವರ್ಗಕೋಣೆ, ವಸತಿ ಗೃಹಗಳು ಸೇರಿದಂತೆ, ಇಡೀ ಆವರಣ ಸೌರ ವಿದ್ಯುತ್‌ನಿಂದ ಕಂಗೊಳಿಸುವ, ನವೀಕರಿಸಬಹುದಾದ, ಸುಸ್ಥಿರ ಸೌರ ಇಂಧನ ಮಾದರಿ ಪ್ರಯೋಗದ ಕುರಿತು, ವಿವಿಧ ಕ್ಷೇತ್ರದ ಯುವ ಸಾಮಾಜಿಕೋದ್ಯಮಿಗಳು, ಸ್ಟಾರ್ಟ್ ಅಪ್ ಸಿ.ಇ.ಓಗಳು ವೀಕ್ಷಿಸಿ, ಮೆಚ್ಚುಗೆ ವ್ಯಕ್ತ ಪಡಿಸಿದರು. ಸೆಲ್ಕೋ ಇಂಡಿಯಾದ, ಕಾರ್ಯನಿರ್ವಹಣಾ ಉಪ ಮಹಾ ಪ್ರಬಂಧಕ, ಗುರುಪ್ರಕಾಶ ಶೆಟ್ಟಿ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಗುರುಪ್ರಕಾಶ ಶೆಟ್ಟಿ ಧ್ವನಿ 26 ಸೆಕೆಂದುಗಳು

<><><>

ಅಗ್ರ ಶ್ರೇಯಾಂಕದ ಟೆನ್ನಿಸ್ ಆಟಗಾರ ಸಿದ್ಧಾಂತ ಬಾಂಥಿಯಾ, ಕಬೀರ್ ಹನ್ಸ್, ನಿತಿನಕುಮಾರ ಸಿನ್ಹಾ, ಪ್ರಣವ್ ಕಾರ್ತಿಕ್ ಅವರು, ಕಲಬುರಗಿಯಲ್ಲಿ ಆಯೋಜಿತ, ಪುರುಷರ ಅಂತಾರಾಷ್ಟ್ರಿಯ ಟೆನಿಸ್ ಫೆಡರೇಷನ್ – ಐ.ಟಿ.ಎಫ್. ಟೆನಿಸ್ ಟೂರ್ನಿಯ, ಅರ್ಹತಾ ಎರಡನೇ ಸುತ್ತಿನಲ್ಲಿ ಗೆಲುವು ಸಾಧಿಸಿ, ಮುಖ್ಯ ಸುತ್ತಿಗೆ ಅರ್ಹತೆ ಗಳಿಸಿದ್ದಾರೆ. ಇಂದಿನಿಂದ ಅರ್ಹತಾ ಸುತ್ತಿನ ಪಂದ್ಯಗಳು ನಡೆಯಲಿವೆ ಎಂದು, ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್ ತಿಳಿಸಿದ್ದಾರೆ.

<><><>

ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ, ಪಾಟೀಲ ಪುಟ್ಟಪ್ಪ ಸಭಾ ಭವನದಲ್ಲಿ, ಇಂದು ಬೆಳಗ್ಗೆ 10.30ಕ್ಕೆ 'ಧರೆಗೆ ದೊಡ್ಡವರು' ವಿಶೇಷ ಕಾರ್ಯಕ್ರಮ ಆಯೋಜಿತವಾಗಿದೆ. ಹಿರಿಯ ಜೀವಗಳ ಬದುಕು–ಸಾಧನೆ ಕುರಿತ ಈ ವಿಶೇಷ ವಿಚಾರ ಸಂಕಿರಣದಲ್ಲಿ, ಉತ್ತರಕನ್ನಡ ಜಿಲ್ಲೆ, ಬಕ್ಕೆಮನೆಯ ಹಿರಿಯ ಪರಿಸರ ವಿಜ್ಞಾನಿ, ಲೇಖಕ, ನಾಗೇಶ ಹೆಗಡೆ ಅವರ ಕುರಿತು, ಶ್ರೀಧರ ಹೆಗಡೆ, ಭದ್ರನ್ ಹಾಗೂ ಜಿ.ಎನ್. ಮೋಹನ ಮಾತನಾಡಲಿದ್ದಾರೆ. ಸಂಜೀವ ಕುಲಕರ್ಣಿ ಸಂಯೋಜಿಸುವರು.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಕರ್ನಾಟಕ ರಾಜ್ಯ ಗ್ರಾಹಕ ವ್ಯವಹಾರ ಪರಿಹಾರ ಆಯೋಗದ ಪೀಠವನ್ನು, ಧಾರವಾಡದಲ್ಲಿ ಸ್ಥಾಪಿಸಲು, ವಿಧಾನಸಭೆ ಪ್ರತಿಪಕ್ಷ ಉಪ ನಾಯಕ, ಅರವಿಂದ ಬೆಲ್ಲದ ಆಗ್ರಹಿಸಿದ್ದಾರೆ.

<><><>

ದಾವಣಗೆರೆ ಜಿಲ್ಲೆಯಲ್ಲಿ, 16 ಬಾಲ್ಯ ವಿವಾಹಗಳನ್ನು ತಡೆಯಲಾಗಿದೆ. ನಾಲ್ಕು ಪ್ರಕರಣಗಳಲ್ಲಿ ಎಫ್.ಐ.ಆರ್. ದಾಖಲಾಗಿವೆ. ಬಾಲ್ಯ ವಿವಾಹಕ್ಕೆ ಸಹಕರಿಸುವ ಪ್ರತಿಯೊಬ್ಬರ ವಿರುದ್ಧ, ಕಾನೂನು ಕ್ರಮ ಜರುಗಿಸಲು, ಪ್ರಧಾನ ಜಿಲ್ಲಾ ನ್ಯಾಯಾಧೀಶರಾದ ರಾಜೇಶ್ವರಿ ಹೆಗಡೆ ಸೂಚಿಸಿದ್ದಾರೆ.

<><><>

ಮಹಾತ್ಮರು, ಪುಣ್ಯ ಪುರುಷರ ಜಯಂತಿಯ ದಿನ, ಶಾಲಾ, ಕಾಲೇಜುಗಳಿಗೆ ರಜೆ ಘೋಷಿಸದೇ, ಮಹಾತ್ಮರ ಬದುಕು, ತತ್ವಗಳ ಬಗ್ಗೆ ತಿಳಿಸಲು, ವಿಚಾರ ಸಂಕಿರಣ ಆಯೋಜಿಸುವಂತೆ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಧಾರವಾಡದಲ್ಲಿ ಆಯೋಜಿಸಿದ್ದ, ಕನಕದಾಸ ಜಯಂತಿಯಲ್ಲಿ, ಅಭಿಪ್ರಾಯಪಟ್ಟರು.

<><><>

ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ, ಬೊಮ್ಮನಹಳ್ಳಿ ವಲಯದಲ್ಲಿ ಇಂದು ಬೆಳಗ್ಗೆ 10 ರಿಂದ 12 ಗಂಟೆ ವರೆಗೆ, ಮುಖ್ಯ ಆಯುಕ್ತ ತುಷಾರ ಗಿರಿನಾಥ, 'ಆಯುಕ್ತರ ನಡೆ, ವಲಯದ ಕಡೆ' ಅಡಿ, ಸಾರ್ವಜನಿಕರ ಅಹವಾಲು ಆಲಿಸುವರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ವಿಶ್ವ ಶೌಚಾಲಯ ದಿನಾಚರಣೆ; ಸ್ವಚ್ಛ ಭಾರತ್ ಮಿಷನ್ ಅಡಿ, ಇಂದಿನಿಂದ ಡಿಸೆಂಬರ್ 10ರ ವರೆಗೆ, "ನಮ್ಮ ಶೌಚಾಲಯ, ನಮ್ಮ ಗೌರವ" ಅಭಿಯಾನ.
- 27ನೇ ಆವೃತ್ತಿಯ, 'ಬೆಂಗಳೂರು ತಂತ್ರಜ್ಞಾನ ಶೃಂಗಸಭೆ'ಗೆ, ಇಂದು ಮುಖ್ಯಮಂತ್ರಿ ಚಾಲನೆ.
- ಹಾರ್ವೆಸ್ಟರ್ ಹಬ್; ಬಿತ್ತನೆಯಿಂದ ಬೆಳೆ ಕಟಾವಿನ ವರೆಗೂ, ಯಾಂತ್ರಿಕೃತ ಬೇಸಾಯ ಕ್ರಮಕ್ಕೆ, ಒತ್ತು – ಎನ್.ಚಲುವರಾಯಸ್ವಾಮಿ.
- 'ಉದ್ಯಮಶೀಲತೆ ಜಾಗ್ರತಿ ಯಾತ್ರೆ'; ಧಾರವಾಡದ ಕಲಕೇರಿ ಸಂಗೀತ ವಿದ್ಯಾಲಯಕ್ಕೆ ಭೇಟಿ ನೀಡಿದ, ನೂರಾರು ಸಾಮಾಜಿಕೋದ್ಯಮಿಗಳು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.